## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಗ್ರಾಅಪ: 213 :ಉಖಾಯೋ 2009 ದಿನಾಂಕ 01-06-2010**

**<u>ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ</u>**

**<u>ಒಂಬುಡ್ಸ್‌ಮನ್‌ಗಳ ನೇಮಕಾತಿ</u>-2010**

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಧಿನಿಯಮ 2005ರ ಪ್ರಕರಣ 27 ರ ಉಪ ಪ್ರಕರಣ 1 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೇಂದ್ರ ಸರ್ಕಾರವು ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸ್ವೀಕರಿಸಲಾಗುವ ದೂರುಗಳನ್ನು ವಿಲೇ ಮಾಡಿ ಪರಿಹರಿಸಲು ಜಿಲ್ಲೆಗೆ ಒಬ್ಬರಂತೆ ಒಂಬುಡ್ಸ್‌ಮನ್‌ಗಳನ್ನು ನೇಮಿಸಲು ದಿನಾಂಕ 07 ಸೆಪ್ಟೆಂಬರ್ 2009 ರಂದು ಸೂಚನೆಗಳನ್ನು ಹೊರಡಿಸಲಾಗಿರುತ್ತದೆ. ಕೇಂದ್ರ ಸರ್ಕಾರವು ಕರ್ನಾಟಕ ರಾಜ್ಯದಲ್ಲಿ ಒಂಬುಡ್ಸ್‌ಮನ್‌ಗಳ ನೇಮಕಾತಿಗಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಿರುತ್ತದೆ. ಒಂಬುಡ್ಸ್‌ಮನ್‌ಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ 28/10/2009 ರಂದು ರಾಜ್ಯದ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಅದರಂತೆ ಸ್ವೀಕರಿಸಲಾದ ಎಲ್ಲಾ ಅರ್ಜಿಗಳನ್ನು ಸಮಿತಿಯು ದಿನಾಂಕ 22-05-2010 ರಂದು ಪರಿಶೀಲಿಸಿ ಈ ಕೆಳಕಂಡ ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುತ್ತದೆ. ಸದರಿ ಆಯ್ಕೆ ಮಾಡಿರುವ ಅಭ್ಯರ್ಥಿಗಳ ಸಂಬಂಧ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಅಂತಹ ಆಕ್ಷೇಪಣೆಗಳನ್ನು ಆಹ್ವಾನಿಸುವ ಸಲುವಾಗಿ ಆಯ್ಕೆ ಪಟ್ಟಿಯನ್ನು ಪ್ರಕಟಿಸಲು ಸಮಿತಿಯು ತೀರ್ಮಾನಿಸಿರುತ್ತದೆ.

ಆದಕಾರಣ ಆಯ್ಕೆ ಪಟ್ಟಿಯನ್ನು ಈ ಮೂಲಕ ಪ್ರಕಟಿಸುತ್ತಾ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ, 3 ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001 ಫ್ಯಾಕ್ಸ್-22353927. ಈ ಮೇಲ್: nregs-ka@nic.in ಇವರಿಗೆ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಲ್ಲಿಸಬಹುದು.

| ಕ್ರಮ ಸಂ. | ಹೆಸರು | ವಿವರ | ನಿಗದಿಪಡಿಸಿರುವ ಜಿಲ್ಲೆಯ ಹೆಸರು |
|---|---|---|---|
| 1 | ಎ ಎಸ್ ಪಾಟೀಲ್. | ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಗೋಕಾಕ, ಹೊಸಪೇಟ ಗಲ್ಲಿ, ಕೋರ್ಟ್ ರೋಡ್, ಗೋಕಾಕ್, ಬೆಳಗಾಂ. | ಬಾಗಲಕೋಟೆ |
| 2 | ಮಹಿಪಾಲ ದೇಸಾಯಿ. | ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಬೆಂಗಳೂರು, 1444, ಸಾಯಿನಿವಾಸ, 1 ನೇ ಮೇನ್, 1 ನೇ ಕ್ರಾಸ್, ಜುಡಿಷಿಯಲ್ ಲೇಔಟ್, ಬೆಂಗಳೂರು. | ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ |
| 3 | ಎಸ್‌ಸಿ ಇಂಗಳಗಿ. | ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಬೆಳಗಾಂ, ಬಿ4, 419, ಘಟಪ್ರಭಾ ಬ್ಲಾಕ್, ನ್ಯಾಷನಲ್ ಗೇಮ್ಸ್ ವಿಲೇಜ್, ಕೋರಮಂಗಲ, ಬೆಂಗಳೂರು. | ಬೆಳಗಾಂ |
| 4 | ಓತಿ ಶರಣಪ್ಪ. | ನಿವೃತ್ತ ಜಂಟಿ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖ, #8/6/15, ಜೆ ಪಿ ನಗರ ಬಿರಾದಾರ್ ಆಸ್ಪತ್ರೆ ಹತ್ತಿರ ಜನವಾಡಾ ರಸ್ತೆ ಬೀದರ್ | ಬೀದರ್ |
| 5 | ಬಿ ಎಂ ಸಿಂದಗಿ. | ನಿವೃತ್ತ ನ್ಯಾಯಾಧೀಶರು, ಬಿಜಾಪುರ, ಪ್ಲಾಟ್ ನಂ. 499, ಎಸ್ ಆರ್ ಕಾಲೋನಿ, ಜಿಲ್ಲಾ ಕೋರ್ಟ್ ಕಾಂಪ್ಲೆಕ್ಸ್ ಹಿಂಭಾಗ, ಬಿಜಾಪುರ. | ಬಿಜಾಪುರ |
| 6 | ಎಸ್ ವಿ ರಾಘವೇಂದ್ರ ರಾವ್. | ನಿವೃತ್ತ ಡಿಜಿಎಂ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, 73, ವಿಷ್ಣು ಚಿತ್ರ, 2 ನೇ ಕ್ರಾಸ್, 4 ನೇ ಬ್ಲಾಕ್, 3 ನೇ ಫೇಸ್, 3 ನೇ ಹಂತ, ಬನಶಂಕರಿ, ಬೆಂಗಳೂರು. | ಚಿಕ್ಕಬಳ್ಳಾಪುರ |
| 7 | ಬಿ ರಾಮಸ್ವಾಮಿ. | ನಿವೃತ್ತ ಮುಖ್ಯ ವ್ಯವಸ್ಥಾಪಕರು, ಕಾರ್ಪೋರೇಷನ್ ಬ್ಯಾಂಕ್, ಚಿಕ್ಕಮಗಳೂರು, ಶಿವ ಕೃಪಾ, 5ನೇ ವಾರ್ಡ್, ಕುವೆಂಪುನಗರ, ಸೇಂಟ್ ಮೇರಿ ಸ್ಕೂಲ್ ಹತ್ತಿರ, ಚಿಕ್ಕಮಗಳೂರು | ಚಿಕ್ಕಮಗಳೂರು |
| 8 | ಶೀನ ಶೆಟ್ಟಿ. | ಸಮಾಜ ಸೇವೆ, ಫೀಲ್ಡ್ ವ್ಯೂ, ಪಂಪ್‌ವೆಲ್ ಹತ್ತಿರ, ಕಂಕನಾಡಿ, ಮಂಗಳೂರು. | ದಕ್ಷಿಣ ಕನ್ನಡ |
| 9 | ಎ ಹೆಚ್ ಅಡ್ಡಪ್ಪನವರ್. | ನಿವೃತ್ತ ಜಿಲ್ಲಾ ನ್ಯಾಯಾಧೀಶರು, ದಾವಣಗೆರೆ, ನಂ. 63, 2 ನೇ ಮಹಡಿ, 5 ನೇ ಮೇನ್, 5 ನೇ ಕ್ರಾಸ್, ಆರ್‌ಪಿಸಿ ಲೇಔಟ್, ವಿಜಯನಗರ, ಬೆಂಗಳೂರು. | ದಾವಣಗೆರೆ |
| 10 | ವಿ ಬಿ ಶಿರಿಯಣ್ಣನವರ್. | ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಧಾರವಾಡ, ಸಮೃದ್ಧಿ, ಹಳೆಯ ಉದ್ಯೋಗ ವಿನಿಮಯ ಕಛೇರಿ ಹಿಂಭಾಗ, ವಿದ್ಯಾನಗರ, ಹುಬ್ಬಳ್ಳಿ. | ಧಾರವಾಡ |
| 11 | ಆರ್ ಎಸ್ ಬೀರಣ್ಣನವರ್. | ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಗದಗ್, ಪ್ರಜ್ವಲ್, 2 ನೇ ಮೇನ್, 2 ನೇ ಕ್ರಾಸ್, ಮಾರುತಿ ದೇವಸ್ಥಾನ ಹತಿರ, ನಾರಾಯಣಪುರ, ಧಾರವಾಡ. | ಗದಗ್ |

| | | | |
|---|---|---|---|
| 12 | ಎ ಎಂ ಗೌಣಿ. | ನಿವೃತ್ತ ಕೆ ಎ ಎಸ್ ಅಧಿಕಾರಿ. ಗುಲ್ಬರ್ಗಾ, ಫ್ಲಾಟ್ ನಂ.63, ವಿದ್ಯಾನಗರ(ಬಡೇಪೂರ), ಬಸವೇಶ್ವರ ಆಸ್ಪತ್ರೆ ಎದುರುಗಡೆ, ಗುಲಬರ್ಗಾ | ಗುಲ್ಬರ್ಗಾ |
| 13 | ಕೆ ಎ. ಸುಬ್ರಮಣಿ | ನಿವೃತ್ತ ಡಿಜಿಎಂ, ಡಿಸಿಸಿ ಬ್ಯಾಂಕ್, ಮಡಿಕೇರಿ, 225, 3 ನೇ ಬ್ಲಾಕ್, ದಖ್ಖಿನಿ ಮೊಹಲ್ಲಾ, ವಿರಾಜಪೇಟೆ, ಕೊಡಗು | ಕೊಡಗು |
| 14 | ವಿ ಸಿ ಹಟ್ಟಿ. | ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಮಂಗಳೂರು, ನಂ. 1048, ಹೊಂಬಿಸಿಲು, 2 ನೇ ಬ್ಲಾಕ್, 2 ನೇ ಕ್ರಾಸ್, ಬಿಇಎಲ್ ಲೇಔಡ್, ವಿದ್ಯಾರಣ್ಯಪುರ, ಬೆಂಗಳೂರು. | ಮೈಸೂರು |
| 15 | ಬಿ ಕೆ ಭೂತೆ. | ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಯಲಬುರ್ಗಾ, ಕೇ/ಆ, ವಿಎಸ್ ಪಲ್ಲದ, ಜವಾಹರ್ ರೋಡ್, ಪ್ರೇಮ ಸೈಕಲ್ ಷಾಪ್, ಕೊಪ್ಪಳ ಮತ್ತು ಜಿಲ್ಲೆ. | ರಾಯಚೂರು |
| 16 | ಎಸ್ ಜಿ ಹಿರೇಮಠ. | ನಿವೃತ್ತ ಹಿರಿಯ ಸಿವಿಲ್ ನ್ಯಾಯಾಧೀಶರು, ನಂ. 125, ಬಿಹೆಚ್‌ಇಎಲ್, 2 ನೇ ಹಂತ, ಕೆಂಪೇಗೌಡ ರಸ್ತೆ, ಎಲ್‌ಜಿ ಟೌನ್ ಹಿಂಭಾಗ, ಪಟ್ಟಣಗೆರೆ, ರಾಜರಾಜೇಶ್ವರಿ ನಗರ, ಬೆಂಗಳೂರು. | ತುಮಕೂರು |
| 17 | ಲಕ್ಷ್ಮಿನಾರಾಯಣ ಎಂ ಹೆಗಡೆ. | ಸಮಾಜ ಸೇವೆ, ಮಲೆನಾಡು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ 2 ಮಹಡಿ ಮಧುಕರ ಕಟ್ಟಡ ಉಣ್ಣಿಮಠ ಗಲ್ಲಿ ಶಿರಸಿ | ಉತ್ತರ ಕನ್ನಡ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಎನ್ ಎಸ್ ಪ್ರಸನ್ನ ಕುಮಾರ್,
ನಿರ್ದೇಶಕರು,
ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ
ಖಾತರಿ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.